**ದಿಃ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಎಫ್.ಡಬ್ಲೂ ವಕೀಲರಿಂದಃ ಪ್ರತಿವಾದಿಯ ಪರವಾಗಿಃ**

24) ಪ್ರತಿವಾದಿ ರಾಮಪ್ಪ ನನ್ನ ಬಳಿ ಕೈಗಡ ಸಾಲವನ್ನು ತೆಗೆದುಕೊಂಡ ಬಳಿಕ ಅದನ್ನು ಮರುಪಾವತಿ ಮಾಡಿದ್ದ ಅಂದರೆ ಸರಿ. ನನ್ನ ಹೆಂಡತಿಯ ಹೆಸರಿನಲ್ಲಿ ಆದಂತಹ ಖರೀದಿ ಕರಾರು ಪತ್ರದ ಮೇಲೆ ಖರೀದಿ ಪತ್ರವನ್ನು ಮಾಡಿಕೊಡಲು ನನ್ನ ಹೆಂಡತಿ ಅಸ್ವಸ್ಥಳಾಗಿದ್ದರಿಂದ ಖರೀದಿ ಪತ್ರವನ್ನು ಮಾಡಿಕೊಟ್ಟಿರುವದಿಲ್ಲ. ದಿನಾಂಕಃ 03.06.2019 ರಂದು ಖರೀದಿ ಕರಾರು ಪತ್ರ ಮಾಡಿಕೊಟ್ಟ ಬಳಿಕ ಸದರಿ ಖರೀದಿ ಕರಾರು ಪತ್ರದಲ್ಲಿ ಹೇಳಿದಂತಹ ಆಸ್ತಿಗೆ ಹೆಚ್ಚಿಗೆ ಬೆಲೆಯನ್ನು ಕೇಳಿದ್ದರಿಂದ ಆ ಹೆಚ್ಚಿಗೆ ಬೆಲೆಯನ್ನು ಕೊಡದೇ ಇದ್ದುದರಿಂದ, ಖರೀದಿ ಪತ್ರವನ್ನು ಪ್ರತಿವಾದಿ ಮಾಡಿಕೊಟ್ಟಿರುವದಿಲ್ಲ. ಪ್ರತಿವಾದಿ 2019 ರಲ್ಲಿ ಆದಂತಹಂ ಖರೀದಿ ಕರಾರು ಪತ್ರದ ಪ್ರಕಾರ ಪ್ರತಿವಾದಿಯು ಹೆಚ್ಚಿಗೆ ಹಣ ಕೇಳಿದ್ದರಿಂದ ನಮಗೆ ಹೆಚಿಚಗೆ ಹಣ ಕೊಡಲು ಆಗದೇ ಇದ್ದುದರಿಂದ ನಾವು ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿರುವದಿಲ್ಲ. ನನ್ನ ಹೆಸರಿನಲ್ಲಿ ಆದಂತಹ 2019 ನೇ ಇಸ್ವಿಯಲ್ಲಿ ಖರೀದಿ ಕರಾರು ಪತ್ರ ಆದಾಗ ಸದರಿ ಖರೀದಿ ಕರಾರು ಪತ್ರದಲ್ಲಿ ಕಾಣಿಸಿದಂತಹ ಆಸ್ತಿಯ ಮೇಲೆ ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ ಗುತ್ತಲ ಶಾಖೆಯಲ್ಲಿ ಅಂದಾಜು ರೂ.5,00,000/- ಸಾಲ ಇರಬಹುದು. ಅದೇ ರೀತಿ ಪ್ರತಿವಾದಿಯು ಇನ್ನೂ ಕೈಗಡ ಸಾಲವನ್ನು ತೆಗೆದುಕೊಂಡಿದ್ದನು. ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ ಗುತ್ತಲ ಶಾಖೆಯಲ್ಲಿ ಅಂದಾಜು ರೂ.5,00,000/- ಸಾಲ ಇತ್ತು ಎಂದು ತೋರಿಸಲು ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ.

25) ದಿನಾಂಕಃ 03.06.2019 ರಲ್ಲಿ ಖರೀದಿ ಕರಾರು ಪತ್ರ ಆದಾಗ ಸದರಿ ಖರೀದಿ ಕರಾರು ಪತ್ರದಲ್ಲಿ ಬರೆದಂತಹ ಆಸ್ತಿಗೆ ಸಂಬಂದಪಟ್ಟ ಎಲ್ಲ ಕಂದಾಯ ದಾಖಲಾತಿಗಳನ್ನು ಸರಿಪಡಿಸಿದ ಬಳಿಕ ಖರೀದಿ ಪತ್ರ ಮಾಡಿಕೊಡಲಾಗುತ್ತದೆ ಎಂದು ಪ್ರತಿವಾದಿ ನಮಗೆ ತಿಳಿಸಿದ್ದನು. ದಿನಾಂಕಃ 03.06.2019 ನೇ ಇಸ್ವಿಯಂದು ಆದಂತಹ ಖರೀದಿ ಕರಾರು ಪತ್ರದಲ್ಲಿ ಮೇಲೆ ಹೇಳಿದ ಹಾಗೇ ಯಾವುದೇ ವಿಷಯಗಳನ್ನು ಬರೆದಿಲ್ಲ ಅಂದರೆ ಸರಿಯಲ್ಲ. ದಿನಾಂಕಃ 03.06.2019 ರಂದು ಖರೀದಿ ಕರಾರು ಪತ್ರ ಆದಾಗ ಸದರಿ ಖರೀದಿ ಕರಾರು ಪತ್ರದಲ್ಲಿ ಆದಂತಹ ಆಸ್ತಿಯ ಕುರಿತಾಗಿ ಪಾಲು ವಾಟ್ನಿ ದಾವೆ ಚಾಲ್ತಿಯಲ್ಲಿತ್ತು ಅಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ಆದಂತಹ ಖರೀದಿ ಕರಾರು ಪತ್ರದಲ್ಲಿ ಕಾಣಸಿದ ಹಾಗೇ ಪ್ರತಿವಾದಿಯು  ಕೈಗಡ ಸಾಲವನ್ನು ಮರುಪಾವತಿ ಮಾಡಿದ ನಂತರ ನನ್ನ ಹೆಂಡತಿಯ ಹೆಸರಿನಲ್ಲಿ ಇದ್ದಂತಹ ಖರೀದಿ ಕರಾರು ಪತ್ರವನ್ನು ಪ್ರತಿವಾದಿಗೆ ಮರಳಿ ಕೊಡಬೇಕು ಇತ್ತು ಎನ್ನುವ ಷರತ್ತು ಇತ್ತು ಅಂದರೆ ಸರಿಯಲ್ಲ, ನನ್ನ ಹೆಂಡತಿಯ ಹೆಸರಿಗೆ ಖರೀದಿ ಕರಾರು ಪತ್ರವನ್ನು ಪ್ರತಿವಾದಿ ಮಾಡಿರುವದಿಲ್ಲ.

26) ದಿನಾಂಕಃ 03.06.2019 ರಂದು ನನ್ನ ಹೆಂಡತಿಯ ಹೆಸರಿನಲ್ಲಿ ಆದಂತಹ ಖರೀದಿ ಕರಾರು ಪತ್ರದಲ್ಲಿ ಪ್ರತಿವಾದಿಯು ನನಗೆ ಕೈಗಡ ಸಾಲದ ಹಣವನ್ನು ಮರುಪಾವತಿ ಮಾಡಿದ್ದರಿಂದ ದಿನಾಂಕಃ 03.06.2019 ರಂದು ಖರೀದಿ ಕರಾರು ಪತ್ರ ರದ್ದು ಮಾಡಲಾಗಿದೆ ಎಂದು ಬರೆಯಲಾಗಿದೆ ಅಂದರೆ ಸರಿ. 2019 ನೇ ಇಸ್ವಿಯಲ್ಲಿ ಮೇವುಂಡಿ ಗ್ರಾಮದಲ್ಲಿರುವ ಜಮೀನುಗಳಿಗೆ ಒಂದು ಎಕರೆಗೆ ರೂ.8,00,000/- ಮಾರುಕಟ್ಟೆ ಬೆಲೆ ಇತ್ತು ಅಂದರೆ ಸರಿ. 2019 ನೇ ಇಸಿವಯಲ್ಲಿ ಪ್ರತಿವಾದಿಯಾದಂತಹ ರಾಮಪ್ಪ ಈತನಿಗೆ ಯಾವುದೇ ಹಣಕಾಸಿನ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ. 2018 ನೇ ಇಸ್ವಿಯಿಂದ  ಪ್ರತಿವಾದಿ ರಾಮಪ್ಪ

ಈತನ ಮಾನಸಿಕ ಸ್ಥಿತಿ ಸರಿಯಾಗಿ ಇರಲಿಲ್ಲ, ಆದ್ದರಿಂದ ಆ ಕುರಿತಾಗಿ ಆತ ಚಿಕಿತ್ಸೆ ಪಡೆಯುತ್ತಿದ್ದ ಅಂದರೆ ಸರಿಯಲ್ಲ. ದಿನಾಂಕಃ 06.06.2016 ನೇ ಇಸ್ವಿಯಂದು ನನ್ನ ಹೆಂಡತಿಯ ಹೆಸರಿನಲ್ಲಿ ಆದಂತಹ ಖರೀದಿ ಕರಾರು ಪತ್ರ ರದ್ದು ಮಾಡಲು ಪ್ರತಿವಾದಿಯಾದಂತಹ ರಾಮಪ್ಪ ಈತನನ್ನು ನಾನು ಮತ್ತು ನನ್ನ ಹೆಂಡತಿ ಎಲ್ಲರೂ ಸೇರಿ ದಿನಾಂಕಃ 03.06.2019 ರಂದು ನೊಂದಣಿ ಕಛೇರಿಗೆ ಬಂದಿದ್ದೇವು ಅಂದರೆ ಸರಿ. ದಿನಾಂಕಃ 03.06.2019 ರಂದು ಮೊದಲಿನ ಖರೀದಿ ಕರಾರು ಪತ್ರ ರದ್ದು ಆದ ಬಳಿಕ ನಾವು ಪುನಃ ಪ್ರತಿವಾದಿಯಾದಂತಹ ರಾಮಪ್ಪ ಇನ್ನೊಂದು ಹೊಸದಾಗಿ ಖರೀದಿ ಕರಾರು ಪತ್ರ ಬರೆಯಿಸಿಕೊಂಡಿದ್ದೇವು ಅಂದರೆ ಸರಿ.

27) ದಿನಾಂಕಃ 03.06.2019 ರಂದು ನನ್ನ ಹೆಸರಿನಲ್ಲಿ ಪ್ರತಿವಾದಿಯಾದಂತಹ ರಾಮಪ್ಪ ಈತನು ಯಾವುದೇ ಖರೀದಿ ಕರಾರು ಪತ್ರ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರಕ್ಕೆ ನಾನು ಪ್ರತಿವಾದಿ ರಾಮಪ್ಪನಿಗೆ ಯಾವುದೇ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ದಿನಾಂಕಃ 03.06.2019 ರಂದು ಅದಂತಹ ಖರೀದಿ ಕರಾರು ಪತ್ರವನ್ನು ನಾನೇ ಸ್ವತಃ ತಯಾರಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ, ಆದರೆ ಅದನ್ನು ರಾಮಪ್ಪ ಪ್ರತಿವಾದಿ ಈತನು ನನಗೆ ಬರೆದುಕೊಟ್ಟಿರುತ್ತಾನೆ. ದಿನಾಂಕಃ 03.06.2019 ರಂದು ಆದಂತಹ ಖರೀದಿ ಕರಾರು ಪತ್ರಕ್ಕೆ ನಾನು ರಾಮಪ್ಪನ ಹೆಂಡತಿ ಮತ್ತು ಮಕ್ಕಳ ಸಹಿಗಳನ್ನು ಪಡೆದಿರುವದಿಲ್ಲ. ದಿನಾಂಕಃ 03.06.2019 ರಂದು ಆದಂತಹ ಖರೀದಿ ಕರಾರು ಪತ್ರದಲ್ಲಿ ಸಹಿ ಮಾಡಿದಂತಹ ಸಾಕ್ಷಿದಾರರು ನನಗೆ ಸಂಬಂಧಿಕರಾಗಬೇಕು ಅಂದರೆ ಸರಿಯಲ್ಲ, ಆದರೆ ಅವರು ನನಗೆ ದೂರದ ಸಂಬಂಧಿಕರಾಗಬೇಕು ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ.

28) ಸಾಕ್ಷಿದಾರರಾದಂತಹ ಮೈಲಾರೆಪ್ಪ ಗೊರವರ ಈತನು ತೆರೆದಹಳ್ಳಿ ಗ್ರಾಮದವನು ಆಗಿರುತ್ತಾನೆ. ಮತ್ತು ನಿಂಗಪ್ಪ ಗೊರವರ

ಮೇವುಂಡಿ ಗ್ರಾಮದವನು ಆಗಿರುತ್ತಾನೆ. ದಿನಾಂಕಃ 03.06.2019 ರಂದು ಪ್ರತಿವಾದಿಯಾದಂತಹ ರಾಮಪ್ಪ ಈತನಿಗೆ ಗೊತ್ತಾಗದ ಹಾಗೇ ನಾನು ಮತ್ತು ಎಲ್ಲ ಸಾಕ್ಷಿದಾರರೂ ಕೂಡಿ ನಿ.ಪಿ-1 ಖರೀದಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ದಿನಾಂಕಃ 03.06.2019 ರಂದು ಪ್ರತಿವಾದಿ ರಾಮಪ್ಪ ಈತನಿಗೆ ಹಣವನ್ನು ನೊಂದಣಿ ಮಾಡುವ ಕಾಲಕ್ಕೆ ಫೋಟೋದ ಮೇಲೆ ಇರುವ ಕಾಲಂನಲ್ಲಿ ಬರೆದಿಲ್ಲ ಅಂದರೆ ಸರಿ. ನಾನು ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶ ಹೊಂದಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ದಿನಾಂಕಃ 03.06.2019 ರಂದು ಒಂದು ಸುಳ್ಳು ಖರೀದಿ ಕರಾರು ಪತ್ರ ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.